# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 555 |
| ಸದಸ್ಯರ ಹೆಸರು | ಶ್ರೀ ಕುಶಾಲಪ್ಪ ಎಂ.ಪಿ |
| ಉತ್ತರಿಸುವ ದಿನಾಂಕ | 20.08.2026 |
| ಉತ್ತರಿಸುವವರು | ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕಕ್ಕಬೆಯ ಇಗ್ಗುತಪ್ಪ ದೇವಸ್ಥಾನದ ಸಮೀಪ ಮುಜರಾಯಿ ಇಲಾಖೆಯಡಿ ನಿರ್ಮಾಣಗೊಂಡಿರುವ ಅತಿಥಿ ಗೃಹದ ಕಾಮಗಾರಿಗೆ ಸರ್ಕಾರ ಯಾವ ವರ್ಷದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ; | ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕಕ್ಕಬೆಯ ಇಗ್ಗುತಪ್ಪ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆಯ ಸಮೂಹ "ಎ" ಪ್ರವರ್ಗದ ದೇವಾಲಯವಾಗಿರುತ್ತದೆ. ಸದರಿ ದೇವಾಲಯದ ಸಮೀಪ ಮುಜರಾಯಿ ಇಲಾಖೆಯಡಿ ನಿರ್ಮಾಣಗೊಂಡಿರುವ ಅತಿಥಿ ಗೃಹದ ಕಾಮಗಾರಿಗೆ "ದೇವಾಲಯದ ಪ್ರವಾಸ ಯೋಜನೆ" ಅಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ 322 ಮುಅಬಿ 2012 ದಿನಾಂಕ:25.10.2012ರ ಕ್ರಮ ಸಂಖ್ಯೆ:10ರಲ್ಲಿ ರೂ.100.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.<br><br>ಧಾರ್ಮಿಕ ದತ್ತಿ ಆಯುಕ್ತರ ಆದೇಶ ಸಂಖ್ಯೆ: ಸಿಎನ್ಆರ್ /2/ಸಿಆರ್/128/2012-13, ದಿನಾಂಕ:21.06.2013ರಲ್ಲಿ ಸದರಿ ಕಾಮಗಾರಿಯ ರೂ.100.00 ಲಕ್ಷಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ ಮತ್ತು ಸಂಖ್ಯೆ: ಸಿಎನ್ಆರ್/2/ಸಿಆರ್/128/ 2012-13 ದಿನಾಂಕ:11.09.2017ರಲ್ಲಿ ಸದರಿ ಕಟ್ಟಡದ ಹೆಚ್ಚುವರಿ ಪರಿಮಾಣ (ಇ.ಐ.ಆರ್.ಎಲ್ ಮತ್ತು ವರ್ಕ್ ಸ್ಲಿಪ್) ಕಾಮಗಾರಿಗಳಿಗೆ ದೇವಾಲಯದ ನಿಧಿಯಿಂದ ರೂ.16.00 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. |
| ಆ) | ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ಎಷ್ಟು; ಇದುವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ಹಾಗೂ ಎಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ; | ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕಕ್ಕಬೆಯ ಇಗ್ಗುತಪ್ಪ ದೇವಸ್ಥಾನದ ಬಳಿ ವಸತಿ ಗೃಹ ನಿರ್ಮಾಣ ಕಾಮಗಾರಿ ಸಂಬಂಧ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಇ.ಎಸ್.ಐ ಕಟ್ಟಡಗಳ ವಿಭಾಗ, ಬೆಂಗಳೂರು ಇವರಿಗೆ ಮೇಲಿನಂತೆ ಒಟ್ಟು ರೂ.116.00 ಲಕ್ಷಗಳನ್ನು ಠೇವಣೀಕರಿಸಲಾಗಿದ್ದು, ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ. |
| ಇ) | ಕಾಮಗಾರಿ ಪೂರ್ಣಗೊಂಡಿದ್ದರೂ ಹಸ್ತಾಂತರಿಸದೆ ಇರಲು ಗುತ್ತಿಗೆದಾರ ಅಥವಾ ಸಂಬಂಧಿತ ಅಧಿಕಾರಿಗಳ ನಿರ್ಲಕ್ಷ್ಯ ಕಾರಣವೇ; ಪ್ರಸ್ತುತ ಕಟ್ಟಡ ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆಡಳಿತಾತ್ಮಕ ಅನುಮೋದನೆ ನೀಡಲಾದ ಕೆಲವು ಕಾಮಗಾರಿಗಳು ಅಪೂರ್ಣಗೊಂಡಿರುವುದರಿಂದ ಕಟ್ಟಡ ಹಸ್ತಾಂತರ ಆಗಿರುವುದಿಲ್ಲವೆಂದು ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ ಇವರು ವರದಿ ಸಲ್ಲಿಸಿರುತ್ತಾರೆ. |

| | | |
|---|---|---|
| ಈ) | ಅತಿಥಿ ಗೃಹವನ್ನು ಸಾರ್ವಜನಿಕ ಬಳಕೆಗೆ ಯಾವ ನಿಗದಿತ ದಿನಾಂಕದೊಳಗೆ ಪೂರ್ಣಗೊಳಿಸಿ ಉದ್ಘಾಟಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೇ? | ಅತಿಥಿಗೃಹ ಕಾಮಗಾರಿಯನ್ನು ನಿರ್ವಹಿಸಲು ಕಾರ್ಯನಿರ್ವಾಹಕ ಅಭಿಯಂತರರು, ಕಟ್ಟಡಗಳ ವಿಭಾಗ, (ಇ.ಎಸ್.ಐ) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ, ಬೆಂಗಳೂರು ಇವರಿಗೆ ರೂ.116.00 ಲಕ್ಷಗಳನ್ನು ಠೇವಣೀಕರಿಸಲಾಗಿರುತ್ತದೆ.<br><br>ಆದರೆ, ಪ್ರಸ್ತಾಪಿತ ದೇವಾಲಯದ ಅತಿಥಿಗೃಹ ಕಟ್ಟಡ ಕಾಮಗಾರಿಯು ಕಳಪೆ ಕಾಮಗಾರಿಯಾಗಿದ್ದು, ಆರ್.ಸಿ.ಸಿ. ರೂಫಿಂಗ್ ಸೋರುತ್ತಿದ್ದು, ರೂಮುಗಳಿಗೆ ಅಳವಡಿಸಲಾಗಿರುವ ಬಾಗಿಲುಗಳು ಗೆದ್ದಲು ಹಿಡಿದು ಹಾಳಾಗಿರುತ್ತವೆ. ಸದರಿ ವಸತಿ ಗೃಹಕ್ಕೆ ನೀರಿನ ವ್ಯವಸ್ಥೆ, ವಿದ್ಯುತ್ ಸಂಪರ್ಕವನ್ನೂ ಸಹ ನೀಡದೇ ಇರುವುದು ಕಂಡುಬಂದಿರುತ್ತದೆ.<br><br>ಆದುದರಿಂದ, ಅಪೂರ್ಣಗೊಂಡಿರುವ ಕಾಮಗಾರಿ ಗಳನ್ನು ಪೂರ್ಣಗೊಳಿಸಿದ ಬಗ್ಗೆ ಧೃಡೀಕರಣ ಪತ್ರ, ಅನುದಾನ ಬಳಕೆಯಾದ ಬಗ್ಗೆ ಉಪಯುಕ್ತತಾ ಪ್ರಮಾಣ ಪತ್ರ, ಹಾಗೂ ಕಾಮಗಾರಿಯ ವಸ್ತು ಸ್ಥಿತಿಯ ವರದಿ ಸಲ್ಲಿಸಲು ಕೋರಿ ದಿನಾಂಕ:14.08.2026ರಂದು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ವೃತ್ತ, ಬೆಂಗಳೂರು ಇವರಿಗೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಪತ್ರ ಬರೆದಿರುತ್ತಾರೆ.<br><br>ಅತಿಥಿಗೃಹ ಕಟ್ಟಡದ ಕಾಮಗಾರಿಯ ನ್ಯೂನ್ಯತೆಗಳ ಕುರಿತು ಮುಖ್ಯ ಅಭಿಯಂತರರಿಂದ ವರದಿ ಪಡೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಕಂಇ 167 ಮುಸಪು 2026

(ಕೆ.ಎಸ್.ಬಸವಂತಪ್ಪ)
ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು